**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಓ ಎಸ್ 77/2023**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ 11-11-2025** **ಪಿ ಡಬ್ಲ್ಯೂ 1**

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಎನ್ ಹೆಚ್ ವಕೀಲರಿಂದಃ

ಸಿದ್ದಪ್ಪನವರಿಗೆ ನಾನು ಒಬ್ಬಳೇ ಮಗಳು, 4 ಜನ ಗಂಡು ಮಕ್ಕಳು ಎಂದರೆ ಸರಿ. 1 ನೇ ಪ್ರತಿವಾದಿ ನನ್ನ ತಾಯಿ ಎಂದರೆ ಸರಿ. ನನ್ನ ತಂದೆ ಸಿದ್ದಪ್ಪನ ಮೊದಲನೆ ಹೆಂಡತಿ ಹೆಸರು ಸಿದ್ದಮ್ಮ. ನನ್ನ ಮದುವೆಯಾಗಿ ಸುಮಾರು 35 ವರ್ಷಗಳಾಯಿತು. ನನ್ನ ಮದುವೆ ಉಪನೊಂದಣಿ ಕಚೇರಿಯಲ್ಲಿ ನೋಂದಣಿ ಮಾಡುವುದರ ಮೂಲಕ ಆಗಿರುತ್ತದೆ. ನನ್ನ ಮದುವೆ ನೋಂದಣಿ ಪತ್ರ ನನ್ನ ಬಳಿ ಇದೆ. ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನನ್ನ ತಂದೆಯ ಒಪ್ಪಿಗೆ ಮೇರೆಗೆ ನಾನು ಮದುವೆಯಾಗಿರುತ್ತೇನೆ. ನನ್ನ ಗಂಡನ ಹೆಸರು ಸಣ್ಣ ಜಯಪ್ಪ. ಸಣ್ಣ ಜಯಪ್ಪ ನನ್ನ ತಾಯಿಯ ಕಡೆಯಿಂದ ದೂರದ ಸಂಬಂಧಿಕರು. ನನ್ನ ಮದುವೆ ಸಂದರ್ಭದಲ್ಲಿ ನನಗೆ ವಯಸ್ಸು ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಗಂಡ ಸಣ್ಣ ಜಯಪ್ಪನವರು ಇದೇ ನ್ಯಾಯಾಲಯದಲ್ಲಿ ದಾವೆಗಳನ್ನು ಸಲ್ಲಿಸಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರ ಆಸ್ತಿಗಳ ವಿಚಾರವಾಗಿ ಸಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾವೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಯ ಸರ್ವೆ ನಂಬರಗಳು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಎಂದರೆ 2 ಎಕರೆ 36 ಗುಂಟೆ ಒಂದು ಮತ್ತು 21 ಎಕರೆ 21 ಗುಂಟೆ ಜಮೀನು. ದಾವಾ ಆಸ್ತಿಗಳ ಚೆಕ್ ಬಂದಿಗಳನ್ನು ನನಗೆ ಹೇಳಲು ಬರುವುದಿಲ್ಲ. ದಾವಾ ಶೆಡ್ಯೂಲ್ ಐಟಂ ನಂ. 1 ಆಸ್ತಿ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ನನ್ನ ಅಜ್ಜನಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಜ್ಜನ ಹೆಸರು ನಾಗಪ್ಪ. ಸದರಿ ಆಸ್ತಿ ಹೇಗೆ ಮತ್ತು ಯಾವ ದಿನಾಂಕದಂದು ಬಂದಿರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ.

ನಾನು ಹಿಂಡಸಘಟ್ಟದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನನ್ನ ಅಣ್ಣ ತಮ್ಮಂದಿರು ನಂದಿತಾವರೆ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಪ್ರತಿವಾದಿಯರು ತಮ್ಮ ಕುಟುಂಬದ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಳ್ಳುವ ಪೂರ್ವದಲ್ಲಿ ನನಗೆ 1 ಎಕರೆ ಜಮೀನನ್ನು ಕೊಡಬೇಕು ಎಂದು ಮಾತುಕತೆ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ನನಗೆ 2 ಎಕರೆ 36 ಗುಂಟೆ ಜಮೀನು ಕೊಡುತ್ತೇನೆ ಎಂದು ಹೇಳಿದ್ದರು ಎಂದು ನುಡಿಯುತ್ತಾರೆ. ದಿಃ 08.03.2019 ರಂದು ನನ್ನ ತಾಯಿ ಹಿಂಡಸಘಟ್ಟ ಗ್ರಾಮದಲ್ಲಿ 6 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಾಯಿ ಹೆಸರಿಗೆ ನಾನು ನನ್ನ ಗಂಡ ಖರೀದಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನನ್ನ ತಾಯಿ ಶರಣಪ್ಪನವರಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವೇ ಖರೀದಿ ಮಾಡಿದ್ದೇವೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರಕ್ಕೆ ನಾನು ಸಹಿ ಮಾಡಿಲ್ಲ ಎಂದರೆ ಸರಿ. ನನ್ನ

ತಾಯಿ ಖರೀದಿಸಿದ ಜಾಗದಲ್ಲಿ ಪ್ರತಿವಾದಿಯರು ಮನೆ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನೇ ಕಟ್ಟಿಸಿರುತ್ತೇನೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಐಟಂ ನಂ. 1 ರಿಂದ 7 ರ ಆಸ್ತಿಗಳಲ್ಲಿ ಪ್ರತಿವಾದಿ 2 ರಿಂದ 5 ರವರು ಸ್ವಾದೀನದಲ್ಲಿ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಶೆಡ್ಯೂಲ್ ಐಟಂ ನಂ. 8 ರಿಂದ 12 ಆಸ್ತಿಗಳಲ್ಲಿ ಪ್ರತಿವಾದಿಯರು ಎಲ್ಲರೂ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸರಿ. ಸನ್ 1998 ರಲ್ಲಿ ನಮ್ಮ ತಂದೆ ಮತ್ತು ಪ್ರತಿವಾದಿಗಳು ಪಾಲು ವಿಭಾಗ ಮಾಡಿಕೊಂಡಿರುತ್ತಾರೆ ಅದರಂತೆ ಸ್ವಾದೀನದಲ್ಲಿ ಇರುತ್ತಾರೆ ಎಂದರೆ ಸಾಕ್ಷಿಯು ಪಾಲು ವಿಭಾಗದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಿಃ 09.06.2003 ರಲ್ಲಿ ಸರ್ವೆ ನಂ. 31/1 ಪಿ2, 1 ಎಕರೆ 32 ಗುಂಟೆ ಜಮೀನನ್ನು ಪ್ರತಿವಾದಿಯರು ತಮ್ಮ ಹಣದಿಂದ ನನ್ನ ಹೆಸರಿಗೆ ಖರೀದಿ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನನ್ನ ತವರು ಮನೆ ಆಸ್ತಿಯ ಹಿಸ್ಸೆಯ ಬಾಬ್ತು ಎಂದು ಖರೀದಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನಿಮ್ಮ ಅರಿಶಿನ ಸೌಭಾಗ್ಯದ ಸಲುವಾಗಿ ನೀಡಿದ ಹಣದ ಬಾಬ್ತು ಸದರಿ ಆಸ್ತಿಯನ್ನು ಖರೀದಿಸಿ ಕೊಟ್ಟಿರುತ್ತಾರೆ ಎಂದು ಸದರಿ ಖರೀದಿ ಪತ್ರದಲ್ಲಿ ನಮೂದಿಸಿರುತ್ತಾರೆ ಎಂದರೆ ಸರಿ. ಆದರೆ ಅದನ್ನು ನಾವೇ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನ್ನ ಅಣ್ಣ ತಮ್ಮದಿರು ಇರುವ ಮನೆ ನನ್ನ ತವರು ಮನೆ ಎಂದರೆ ಸರಿ. ದಾವಾ ಶೆಡ್ಯೂಲ್ ಐಟಂ ನಂ. 13 ನ್ನು ಸರ್ವೆ ನಂ. 88/5, 6 ಗುಂಟೆ ಜಮೀನನ್ನು 3 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಜಮೀನನ್ನು ನಮ್ಮ ಕುಟುಂಬದ ಆಸ್ತಿಯಿಂದ ಬಂದ ಹಣದಿಂದ ಖರೀದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿ 3 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲದಿದ್ದರೂ ಸಹ ಎಲ್ಲರೂ ಸೇರಿ ಖರೀದಿ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹಿಂಡಸಘಟ್ಟ ಗ್ರಾಮದಲ್ಲಿರುವ ಸರ್ವೆ ನಂ. 14/7 ರ 6 ಗುಂಟೆ ಜಮೀನಿನಲ್ಲಿ ಸುಮಾರು 50-60 ಲಕ್ಷ ರೂಗಳನ್ನು ಖರ್ಚು ಮಾಡಿ 1 ನೇ ಪ್ರತಿವಾದಿ ಮತ್ತು ಅವರ ಮಕ್ಕಳು ಮನೆಯನ್ನು ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮನೆಯನ್ನು ಸಾಲ ಮಾಡಿ ಕಟ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾನು ಸಾಲ ಮಾಡಿ ಕಟ್ಟಿಸಿರುತ್ತೇನೆ ಎಂದು ನುಡಿಯುತ್ತಾರೆ. ಸಾಲ ಮಾಡಿದ ಬಗ್ಗೆ ದಾಖಲೆಗಳು ಇಲ್ಲ.

ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

sd/

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ಹರಿಹರ